<u>ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,</u>

<u>ಹಗರಿಬೊಮ್ಮನಹಳ್ಳಿ</u>

ಸಿ ಸಿ ನಂ. 194/2021

<u>ಸಾಕ್ಷಿಗೆ ದಿನಾಂಕ 29-08-2024 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

C.W.: 3 P.W.: 3

| | | |
|---|---|---|
| ಹೆಸರು | ಃ | ಬಸವರಾಜ |
| ತಂದೆಯ ಹೆಸರು | ಃ | ಬನ್ನೆಪ್ಪ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | ಗಾರೆ ಕೆಲಸ |
| ವಾಸ ಸ್ಥಳ | ಃ | ಹನಸಿ ಗ್ರಾಮ |

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಈಗ್ಗೆ ಸುಮಾರು 2-3 ವರ್ಷದ ಹಿಂದೆ ಪೋಲೀಸರು ನಮ್ಮ ಗ್ರಾಮಕ್ಕೆ ಬಂದಿದ್ದು ನನ್ನ ಹೆಸರು ಮತ್ತು ವಿಳಾಸವನ್ನು ಆ ಸಮಯದಲ್ಲಿ ಪಡೆದಿದ್ದರು ಹಾಗೂ ಆ ಸಮಯದಲ್ಲಿ ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದಿದ್ದರು. ನ್ಯಾಯಾಲಯದ ಮುಂದೆ ವಿ ಸಿ ಮೂಲಕ ಹಾಜರಿರುವ ಆರೋಪಿ ನಮ್ಮ ಊರಿನವರು ಅವರು ನಮಗೆ ಪರಿಚಯ ಇರುತ್ತಾರೆ. ಆರೋಪಿತನ ಮೇಲೆ ಯಾವ ಕಾರಣಕ್ಕಾಗಿ ಪ್ರಕರಣ ನಡೆದಿದೆ ಮತ್ತು ಅವನು ಯಾವ ತಪ್ಪು ಮಾಡಿದ್ದಾನೆಂಬುದರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನಾನು ಯಾವುದೇ ಘಟನೆಯನ್ನು ನೋಡಿಲ್ಲ ಮತ್ತು ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-</u>

ಆರೋಪಿತನು ಚಾಸಾ-1 ರವರಿಗೆ ನೀನು ನಕಲಿ ಔಷಧಗಳನ್ನು ಮಾರಾಟ ಮಾಡುತ್ತೀ ವೈದ್ಯರ ಸಲಹೆ ಇಲ್ಲದೇ ಔಷಧಿಗಳನ್ನು ಮಾರಾಟ ಮಾಡಿ ಸ್ತ್ರಿಯರಿಗೆ ಅಬಾಶನ್ ಮಾತ್ರೆಗಳನ್ನು ನೀಡಿ ಭ್ರೂಣ ಹತ್ಯೆ ಮಾಡುತ್ತೀ ಎಂದು ಸುಳ್ಳು ಆರೋಪ ಮಾಡಿ ಚಾಸಾ-1 ರವರ ವಿರುದ್ಧ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಅರ್ಜಿ ಕೊಟ್ಟು ಆತನ ವಿರುದ್ಧ ಪ್ರಕರಣವನ್ನು ದಾಖಲಿಸುತ್ತೇನೆ, ನನಗೆ ನೀನು ರೂ.10 ಸಾವಿರ ಹಣವನ್ನು ಕೊಡು ಇಲ್ಲದಿದ್ದರೇ ನಿನ್ನ ವಿರುದ್ಧ

ಸುಳ್ಳು ಅರ್ಜಿಗಳನ್ನು ಸಲ್ಲಿಸುತ್ತೇನೆಂದು ರೂ.10 ಸಾವಿರ ಹಣವನ್ನು ಪಡೆದಿರುತ್ತಾನೆಂದರೆ ಸರಿಯಲ್ಲ. ಆ ಘಟನೆಯನ್ನು ನಾನು ನೋಡಿರುತ್ತೇನೆಂದರೆ ಸರಿಯಲ್ಲ.

ದಿಃ 05-05-2021 ರಂದು ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಆರೋಪಿತನು ಪುನಃ ಚಾಸಾ-1 ರವರ ಔಷಧಿ ಅಂಗಡಿಗೆ ಬಂದು ರೂ.10 ಸಾವಿರ ಹಣ ಕೊಡುವಂತೆ ಕೇಳಿದ್ದು, ಆಗ ಚಾಸಾ-1 ರವರು ನಿಮಗೆ ಪದೇ ಪದೇ ಹಣ ಕೊಡಲು ಆಗುವುದಿಲ್ಲಾಂತ ಹೇಳಿದರು ಅದಕ್ಕೆ ಆರೋಪಿತನು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಮೆಡಿಕಲ್ ಶಾಪನ್ನು ಮುಚ್ಚಿಸುವುದಾಗಿ ಏರುಧ್ವನಿಯಲ್ಲಿ ಮಾತನಾಡಿದಾಗ ಆ ವಿಚಾರವಾಗಿ ಚಾಸಾ-1 ಮತ್ತು ಆರೋಪಿತನ ನಡುವೆ ಗಲಾಟೆಯಾಗಿರುತ್ತದೆಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು, ಚಾಸಾ-2, 4, 8 ಜಗಳವನ್ನು ಬಿಡಿಸಿ ಆರೋಪಿಗೆ ಬುದ್ಧಿಹೇಳಿ ಕಳುಹಿಸಿರುತ್ತೇವೆಂದರೆ ಸರಿಯಲ್ಲ. ಆದಾಗ್ಯೂ ಆರೋಪಿತನು ನೀನು ಹೇಗೆ ವ್ಯಾಪಾರ ಮಾಡುತ್ತೀಯಾ ನಾನು ನೋಡಿಕೊಳ್ಳುತ್ತೇನೆಂದು ಬೆದರಿಕೆ ಹಾಕಿರುತ್ತಾನೆಂದರೆ ಸರಿಯಲ್ಲ.

ದಿಃ 16-05-2021 ರಂದು ಬೆಳಿಗ್ಗೆ 10.30 ಗಂಟೆ ಸುಮಾರಿಗೆ ಆರೋಪಿತನು ಹನಸಿ ಗ್ರಾಮದಲ್ಲಿರುವ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಹೋಗಿ ವೈದ್ಯರ ಮೇಲೆ ಹಲ್ಲೆ ಮಾಡಿರುವ ವಿಚಾರ ನನಗೆ ಗೊತ್ತಿರುತ್ತದೆಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ಆರೋಪಿತನು ನಮ್ಮ ಗ್ರಾಮದವನಾಗಿರುವುದರಿಂದ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಘಟನೆಯ ಕುರಿತು ದಿಃ 21-05-2021 ರಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-6 ಅಂತಾ ಗುರುತಿಸಲಾಯಿತು.

ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ